ಕಾಲದ ಕನ್ನಡ ಸಾಹಿತ್ಯ ಚರಿತ್ರೆಯೇ ಆಗಿದೆ. ಆಮೂರರು ಸೃಜನಶೀಲ ಕೃತಿಗಳ ಅನುವಾದದಲ್ಲಿಯೂ ತೊಡಗಿಕೊಂಡಿದ್ದರು. 'ಸಂಧ್ಯಾರಾಗ' ಮತ್ತು 'ಓಂ ಣಮೋ' ಕಾದಂಬರಿಗಳಾದರೆ 'ದ ಸ್ಪೈಡರ್ ಅಂಡ್ ದ ವೆಬ್' ಎನ್ನುವುದು ಬೇಂದ್ರೆಯವರ ಹಲವು ಕವನಗಳ ಸಮರ್ಥವಾದ ಅನುವಾದ. ಈ ಪುಸ್ತಕ ಹೊರಬಂದಾಗ ಆಮೂರರಿಗೆ ಎಂಬತ್ತೆಂಟು ವರ್ಷ.

ಕರ್ನಾಟಕದ ಹೊರಗೆ ಮತ್ತು ಕನ್ನಡ ಬರವಣಿಗೆಯ ಪರಿಧಿಯಾಚೆಗೆ ಸುಮಾರು ನಾಲ್ಕು ದಶಕಗಳನ್ನು ಕಳೆದರೂ ಆಮೂರರಲ್ಲಿ ಅಂತರ್ಜಲವಾಗಿ ಹರಿಯುತ್ತಲೇ ಇದ್ದ ಕನ್ನಡವು ನಿವೃತ್ತಿಯ ನಂತರ ಚಿಲುಮೆಯಾಯಿತು, ನದಿಯಾಯಿತು. ಇದಕ್ಕೆ ಅವರು ಬುದ್ಧಿಪೂರ್ವಕವಾಗಿ ತೆಗೆದುಕೊಂಡ ತೀರ್ಮಾನವೇ ಕಾರಣ. ಕರ್ನಾಟಕದ ಸಂಸ್ಥೆಗಳು, ಲೇಖಕರು, ಪತ್ರಿಕೆಗಳು ಮತ್ತು ಓದುಗರು ತನ್ನನ್ನು ತೆರೆದ ತೋಳುಗಳಿಂದ ಸ್ವೀಕರಿಸಿದರೆಂದು ಅವರು ಮತ್ತೆಮತ್ತೆ ಹೇಳುತ್ತಿದ್ದರು. ಎರಡೂ ಭಾಷೆಗಳಲ್ಲಿ ಸಾಕಷ್ಟು ಪುಸ್ತಕ ವಿಮರ್ಶೆಗಳನ್ನು ಬರೆದರೂ ಸೆಮಿನಾರುಗಳಲ್ಲಿ ಭಾಗವಹಿಸಿದರೂ ಅವರು ಜನಪ್ರಿಯತೆಯೆಂಬ ಮರೀಚಿಕೆಯ ಬೆನ್ನು ಬೀಳಲಿಲ್ಲ. ಮೊದಲಿನಂತೆಯೇ ಗಂಭೀರವಾದ ಓದು ಮತ್ತು ಸಂಶೋಧನೆಗಳಲ್ಲಿ ತೊಡಗಿಕೊಂಡರು. ಅವುಗಳ ಒತ್ತು ಕನ್ನಡ ಸಾಹಿತ್ಯದ ಮೇಲೆ ಇತ್ತು. ಅವರು ಇಂಗ್ಲಿಷ್ ಶಾಲೆಯಲ್ಲಿ ಕಲಿತ ಶಿಸ್ತನ್ನು ಕನ್ನಡ ಕೃತಿಗಳ ಅಧ್ಯಯನದಲ್ಲಿ ಬಳಸಿಕೊಂಡರು. ಮೊದಲಿನಂತೆಯೇ ಅಕಡೆಮಿಕ್ ಆದ ಬರವಣಿಗೆಯಲ್ಲಿ ತೊಡಗಿಸಿಕೊಂಡರು. ಅಭಿಜಾತ ಕೃತಿಗಳ ಬಗ್ಗೆ ಇದ್ದ ಅವರ ಪ್ರೀತಿ ಗೌರವಗಳನ್ನು ಪಿ. ಲಂಕೇಶರು ದಾಖಲಿಸಿರುವ ಒಂದು ಘಟನೆಯು ಚೆನ್ನಾಗಿ ಹೇಳುತ್ತದೆ. ಒಮ್ಮೆ ಪತ್ರಿಕೆಯ ಕಾರ್ಯಾಲಯಕ್ಕೆ ಬಂದ ಆಮೂರರನ್ನು ಲಂಕೇಶರು 'ಈಚೆಗೆ ಏನು ಓದಿದಿರಿ?' ಎಂದು ಕೇಳಿದರಂತೆ. ಆಮೂರರು 'ಟಾಲ್‌ಸ್ಟಾಯ್‌ನ ವಾರ್ ಅಂಡ್ ಪೀಸ್ ಓದಿದೆ.' ಎಂದರಂತೆ. ಅದಕ್ಕೆ ಲಂಕೇಶ್ 'ಎರಡನೇ ಸಲಾನಾ?' ಎಂದು ಕೇಳಿದರಂತೆ. ಅದಕ್ಕೆ ಆಮೂರರು, 'ಇಲ್ಲ. ನಾನು ಪ್ರತಿ ವರ್ಷವೂ ಅದನ್ನು ಒಂದು ಸಲ ಓದುತ್ತೇನೆ.' ಎಂದು ಉತ್ತರಿಸಿದರಂತೆ. ಲಂಕೇಶ್ ಇದನ್ನು ಬಹಳ ಮೆಚ್ಚಿಕೊಳ್ಳುತ್ತಾರೆ. ಮುಖ್ಯವಾದ ಪುಸ್ತಕಗಳನ್ನು ಓದದೆ ಇರುವುದಕ್ಕೆ ಕಾರಣ, ನೆಪ ಹುಡುಕುವ ನಮಗೆ ಇಲ್ಲೊಂದು ಪಾಠವಿದೆ. ನಾನು ವೈಯಕ್ತಿಕವಾಗಿ ಬಲ್ಲಂತೆ ಅವರೊಂದಿಗೆ ಅರ್ಧ ಘಂಟೆ ಮಾತಾಡಿದರೆ ಹತ್ತು ಪುಸ್ತಕಗಳ, ಅನೇಕ ಒರಿಜಿನಲ್ ಆದ ವಿಷಯಗಳ ಪ್ರಸ್ತಾಪ ಬರುತ್ತಿತ್ತು. ಕಳೆದ ಕೆಲವು ವರ್ಷಗಳಲ್ಲಿ ಅವರೊಂದಿಗಿನ ಚರ್ಚೆಯು ಸಂಸ್ಕೃತದ ಮತ್ತು ತತ್ತ್ವಶಾಸ್ತ್ರದ ಕೃತಿಗಳ ಕಡೆಗೆ ತಿರುಗಿತ್ತು. ಸುಮ್ಮನೆ ಕೇಳುವುದಷ್ಟೇ ನಮಗೆ ಸಾಧ್ಯವಾಗುತ್ತಿತ್ತು. ಇದು ಆಮೂರ್ ಅವರ ಪೂರ್ವಸಿದ್ಧತೆ ಮತ್ತು ಪಾಂಡಿತ್ಯಗಳ ಸ್ವರೂಪ.

ಅವರು ಕನ್ನಡದಲ್ಲಿ ಸುಮಾರು ನಲವತ್ತೈದು ಪುಸ್ತಕಗಳನ್ನು ಬರೆದಿದ್ದಾರೆ. ಒಬ್ಬ ಕವಿಯನ್ನು ಕುರಿತ ನಾನೂರು ಪುಟಗಳ ಪುಸ್ತಕದಿಂದ ಹಿಡಿದು ಅರ್ಧ ಪುಟದ ಪುಸ್ತಕ ವಿಮರ್ಶೆಯವರೆಗೆ, ತೀರ ಇತ್ತೀಚಿನ ಪಾಶ್ಚಾತ್ಯ ತಿಳಿವಳಿಕೆಯನ್ನು ಅರೆದು ಕುಡಿದಿರುವ 'ಕಾದಂಬರಿ ಸ್ವರೂಪ' ಎಂಬ ಕಬ್ಬಿಣದ ಕಡಲೆಯಿಂದ ಹಿಡಿದು ತಿಳಿನೀರಿನಂತಹ ಶೈಲಿಯಲ್ಲಿ ಹೊಸದೊಂದು ಆಯಾಮದಲ್ಲಿ ಮಹಾಭಾರತವನ್ನು ವಿವರಿಸುವ 'ಭಾರತ ಯಾತ್ರೆ'ಯವರೆಗೆ ಅದರ ಹರಹು ಇದೆ. ಇಲ್ಲಿ ಪ್ರಕಾರ, ಪರಿಕಲ್ಪನೆಗಳ ಪರಿಚಯವಿದೆ. (ಕಾಮೆಡಿ, ಕಥನಶಾಸ್ತ್ರ) ಲೇಖಕ ಪರಿಚಯಗಳಿವೆ. (ಮಹಾಕವಿ ಮಿಲ್ಟನ್, ವಿನಾಯಕ ಕೃಷ್ಣ ಗೋಕಾಕ, ಅ.ನ. ಕೃಷ್ಣರಾಯರು) ಸಂಕಲನ ಹಾಗೂ ಸಂಪಾದಿತ ಕೃತಿಗಳಿವೆ. (ಹನ್ನೆರಡು ಸಂಪುಟಗಳಲ್ಲಿರುವ ಶ್ರೀರಂಗರ ಸಮಗ್ರ ಸಾಹಿತ್ಯ, ಮಹಿಳೆಯರ ಪ್ರಾತಿನಿಧಿಕ ಕಥೆಗಳನ್ನು ಒಳಗೊಂಡಿರುವ 'ಅವಳ ಕಥೆಗಳು', 'ಬೇಂದ್ರೆ ಕಾವ್ಯ'ವನ್ನು ಕುರಿತು ಬಂದಿರುವ ಅತ್ಯುತ್ತಮ ವಿಮರ್ಶೆಯ ಆಂಥಾಲಜಿ) ತೊಂಬತ್ತರ ವಯಸ್ಸಿನಲ್ಲಿ ಬರೆದ 'ನೀರ ಮೇಲಣ ಗುಳ್ಳೆ' ಎಂಬ ಆತ್ಮಕಥೆ ಮತ್ತು ಲೆಕ್ಕವಿಲ್ಲದಷ್ಟು ವಿಮರ್ಶಾ ಲೇಖನಗಳ ಸಂಕಲನಗಳು. ('ಕೃತಿ ಪರೀಕ್ಷೆ',